## 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.

**ಸಿಸಿ ನಂಬರಃ 348/2018**

ಸಿ ಡಬ್ಲ್ಯೂ3

ಪಿ ಡಬ್ಲ್ಯೂ2

**ಸಾಕ್ಷಿದಾರರ ಹೆಸರು** : ಪರಮೇಶ್ವರಗೌಡ ಪಾಟೀಲ

**ತಂದೆಯ ಹೆಸರು** : ಸಿದ್ದನಗೌಡ

**ವಯಸ್ಸು** : 66 ವರ್ಷ

**ಉದ್ಯೋಗ** : ನಿವೃತ್ತ ನೌಕರ

**ವಾಸ** : ಹೊನ್ನಾಳಿ, ತಾಲೂಕು ಶಿವಮೊಗ್ಗ

**ಸಾಕ್ಷಿ ವಿಚಾರಣೆ ಸಿ ಆರ್ ಪಿ ಸಿ ಕಾಯ್ದೆ ಕಲಂಃ 299 ನೇದ್ದರ ಅಡಿಯಲ್ಲಿ**

**ದಿನಾಂಕಃ 17-07-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಸಹಾಯಕ ಸರಕಾರ ಅಭಿಯೋಜಕರಿಂದ**

1. ನಾನು ಗ್ರಾಸಿಂ ಪ್ಯಾಕ್ಟರಿಯಲ್ಲಿ ಸೆಕ್ಯೂರಿಟಿ ಗಾರ್ಡ್ ಅಂತಾ ಕೆಲಸ ನಿರ್ವಹಿಸಿ 2014 ರಲ್ಲಿ ನಿವೃತ್ತಿಯನ್ನು ಹೊಂದಿರುತ್ತೇನೆ. 22-10-2003 ರಂದು ಪೋಲಿಸರು ಮಹಜರು ಮಾಡುವ ಸಲುವಾಗಿ ಗ್ರಾಸಿಂ ಪ್ಯಾಕ್ಟರಿಗೆ ಬಂದಿದ್ದರು. ಗ್ರಾಸಿಂ ಪ್ಯಾಕ್ಟರಿಯ ಸ್ಟ್ಯಾಫಲ್ ಪೈಬರ್ ಬೇಲುಗಳನ್ನು ಲಾರಿಯಲ್ಲಿ ತುಂಬಿಕೊಂಡು ಚಾಲಕನ್ನು ಪ್ಯಾಕ್ಟರಿಗೆ ಮುಟ್ಟಿಸುತ್ತೇನೆ ಅಂತಾ ಹೋಗಿದ್ದು ಅದನ್ನು ಸಂಬಂದಪಟ್ಟ ಪ್ಯಾಕ್ಟರಿಗೆ ಮುಟ್ಟಿಸದೆ ವಂಚನೆ ಮಾಡಿರುತ್ತಾರೆ ಅಂತಾ ಪ್ರಕರಣ ದಾಖಲಾಗಿದ್ದು ಅ ಸಂಬಂದ ಪೋಲಿಸರು ಮಹಜರಿಗೆ ಬಂದಿದ್ದರು. ಆ ಸಮಯಕ್ಕೆ ಹಾಜರಿದ್ದು ಪಂಚನಾಮೆಯಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿ ಟ್ರೂ ಕಾಫಿ ಮಹಜರ್‌ನಲ್ಲಿರುವ ತನ್ನ ಸಹಿಯನ್ನು ನೋಡಿ

ಗುರುತಿಸಿದ್ದರಿಂದ ಮಹಜರ್ ನ ಟ್ರೂ ಕಾಫಿಯನ್ನು ನಿಪಿ-8 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/–
3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.